ಮಂಗಳೂರು ಮಹಾನಗರಪಾಲಿಕೆಯಲ್ಲಿ ವಿಲೀನಗೊಂಡ ಗ್ರಾಮಗಳಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸುವ ಬಗ್ಗೆ

೩೮೧ ಶ್ರೀ ಎನ್. ಎಂ. ಅಡ್ಯಾಂತಾಯ (ಸೂರತ್ಕಲ್).— ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಮಂಗಳೂರು ಮಹಾ ನಗರಸಭೆಯಲ್ಲಿ ವಿಲೀನಗೊಳಿಸಿದ ಗ್ರಾಮಗಳ ಸಂಖ್ಯೆ ಎಷ್ಟು?

ಆ) ಈ ಗ್ರಾಮಗಳಲ್ಲಿ ತೆರಿಗೆಯನ್ನು ವಿಧಿಸಲು ಕೈಗೊಂಡ ವರ್ಗೀಕರಣಕ್ಕೆ ಯಾವ ತಳಹದಿಯನ್ನು ಆಧಾರ ಮಾಡಿಕೊಳ್ಳಲಾಗಿದೆ,

ಇ) ಈ ರೀತಿ ವಿಲೀನಗೊಳಿಸಲ್ಪಟ್ಟ ಗ್ರಾಮಗಳಲ್ಲಿರುವ ಸರ್ಕಾರಿ ನೌಕರರಿಗೆ ಮನೆ ಬಾಡಿಗೆ ಭತ್ಯ ಮತ್ತಿತರ ಭತ್ಯಗಳನ್ನು ನೀಡಲಾಗುತ್ತಿದೆಯೆ?

ಈ) ಈ ರೀತಿ ವಿಲೀನಗೊಳಿಸಲ್ಪಟ್ಟ ಗ್ರಾಮಗಳಿಗೆ ನಾಗರೀಕ ಸೌಲಭ್ಯಗಳಿಗಾಗಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—

ಅ) ಹದಿನಾಲ್ಕು

ಆ) ೧೯೭೬ರ ಕರ್ನಾಟಕ ಮಹಾನಗರಪಾಲಿಕೆಗಳ ಪ್ರಕರಣ ೧೦೮ ಮತ್ತು ೫೦೨ರಂತೆ ತೆರಿಗೆ ಹೊರಿಸುವ ಸಲುವಾಗಿ ಈ ಪ್ರದೇಶಗಳನ್ನು 'ನಗರ ಪ್ರದೇಶ' ಹಾಗೂ ಗ್ರಾಮಾಂತರ ಪ್ರದೇಶ'ಗಳೆಂದು ವರ್ಗೀಕರಿಸಲಾಗಿದೆ.

ಇ) ಈ ಪೈಕಿ ಕೆಲವು ಗ್ರಾಮಗಳಲ್ಲಿ ಸದರಿ ಭತ್ಯಗಳನ್ನು ನೀಡಲಾಗುತ್ತಿದೆ.

ಈ) ಮಹಾನಗರಪಾಲಿಕೆಯು ತನ್ನ ಆದಾಯದಲ್ಲಿ ೧೯೮೦ರಿಂದ ಇಲ್ಲಿಯವರೆಗೆ ಸುಮಾರು ಒಂದೂವರೆ ಕೋಟಿ ರೂಪಾಯಿಗಳನ್ನು ನೀರು, ವಿದ್ಯುತ್, ರಸ್ತೆ ಮುಂತಾದ ನಾಗರೀಕ ಸೌಲಭ್ಯಗಳಿಗೆ ಖರ್ಚು ಮಾಡಿದೆ.

ಅಧ್ಯಕ್ಷರು.—ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತೇನೆ.

ಶ್ರೀ ಜಾಕಬ್ ಮತ್ತು ಲಕ್ಷ್ಮಣರಾವ್ ಸಮಿತಿಯ ವರದಿ ಬಗ್ಗೆ

೩೯೫ ಶ್ರೀ ಜಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಸ್ಥಳೀಯ ಸಂಸ್ಥೆಗಳ ಸಮಸ್ಯೆಗಳ ಪರಿಹಾರದ ಬಗ್ಗೆ ಸಲಹೆ ನೀಡಲು ಶ್ರೀ ಜಾಕಬ್ ಮತ್ತು ಲಕ್ಷ್ಮಣರಾವ್ ಸಮಿತಿಯು ವರದಿ ಸರ್ಕಾರದವರಿಗೆ ಸಲ್ಲಿಸಿ ಎಷ್ಟು ತಿಂಗಳಾಯಿತು ?

ಆ) ಈ ಸಮಿತಿಯ ವರದಿ ಅನುಷ್ಠಾನಕ್ಕೆ ತರಲು ಸರ್ಕಾರದವರು ಈಗಾಗಲೇ ಏನಾದರೂ ಕ್ರಮ ಕೈಗೊಂಡಿದ್ದಾರೆಯೆ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—

ಅ) ಆಯೋಗವು ೨೨-೭-೧೯೮೫ರಂದು ತನ್ನ ವರದಿಯನ್ನು ಸಲ್ಲಿಸಿರುತ್ತದೆ.

ಆ) ಆಯೋಗದ ಶಿಫಾರಸ್ಸುಗಳು ಸರ್ಕಾರದ ಪರಿಶೀಲನೆಯಲ್ಲಿವೆ.

ಗೃಹ ನಿರ್ಮಾಣ ಯೋಜನೆ

೧೫೬. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).— ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಗರ ಪ್ರದೇಶದ ಜನತೆಗೆ ಮಾತ್ರ ಗೃಹ ನಿರ್ಮಾಣ ಯೋಜನೆ ಸೀಮಿತವಾಗಿದೆಯೆ,

ಆ) ಈ ಯೋಜನೆಯನ್ನು ಗ್ರಾಮೀಣ ಜನತೆಗೆ ಅನುಕೂಲವಾಗುವಂತೆ ಮಾರ್ಪಾಡು ಮಾಡಲಾಗುವುದೇ,

ಇ) ಹಾಗಿದ್ದಲ್ಲಿ, ಯಾವ ವರ್ಷದಿಂದ ಇದನ್ನು ಅನುಷ್ಠಾನಕ್ಕೆ ತರಲಾಗುವುದು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ವಸತಿ ರಾಜ್ಯ ಮಂತ್ರಿಗಳು).—

ಅ) ಇಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಇದುವರೆವಿಗೆ ಸುಮಾರು ೫,೧೦೩ಳಿ ಮನೆಗಳನ್ನು ೧೧೯.೫೭ ಕೋಟಿ ರೂಪಾಯಿ ವೆಚ್ಚದಲ್ಲಿ ಜನತಾ ಮನೆ ಯೋಜನೆಯಡಿಯಲ್ಲಿ ಕಟ್ಟಲಾಗಿದೆ. ಗೃಹ ಮಂಡಳಿಯೂ ಇದುವರೆವಿಗೆ ಸುಮಾರು ೧೫,೦೦೦ ಮನೆಗಳ ನಿರ್ಮಾಣವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಮಾಡಿದೆ

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬೆಂಗಳೂರು ನಗರದಲ್ಲಿ ಕಾರ್ಮಿಕ ವಿವಾದದಿಂದ ಮುಚ್ಚಿರುವ ಕಾರ್ಖಾನೆಗಳು

೨೧೧. ಶ್ರೀ ಬಿ. ಎ. ಉಮ್ಮರಬ್ಬ (ವಿಠಲ).— ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೪-೮೫ ಹಾಗೂ ೧೯೮೫-೮೬ನೇ ಸಾಲುಗಳಲ್ಲಿ ಬೆಂಗಳೂರು ನಗರದಲ್ಲಿ ಕಾರ್ಮಿಕ ವಿವಾದದಿಂದ ಹಾಗೂ ಇತರ ಕಾರಣಗಳಿಂದ ಮುಚ್ಚಿರುವ ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರದ ಕೈಗಾರಿಕೆಗಳ ಸಂಖ್ಯೆ ಎಷ್ಟು ಹಾಗೂ ಅವುಗಳು ಯಾವುವು,

ಆ) ಇವುಗಳ ಪುನರಾರಂಭಕ್ಕೆ ಸರ್ಕಾರ ಮಾಡಿರುವ ಪ್ರಯತ್ನವೇನು ?

ಶ್ರೀ ಡಿ. ಮಂಜುನಾಥ (ಕಾರ್ಮಿಕ ಸಚಿವರು) —

ಅ) ಬೆಂಗಳೂರು ನಗರದಲ್ಲಿ ಮುಚ್ಚಲ್ಪಟ್ಟಿರುವ ಕೈಗಾರಿಕೆಗಳ ವಿವರಗಳು ಇಂತಿವೆ.—

ವರ್ಷ	ಮುಚ್ಚಿರುವ ಕೈಗಾರಿಕೆಗಳ ಸಂಖ್ಯೆ	
	ಸಾರ್ವಜನಿಕ	ಖಾಸಗಿ
೧೯೮೪-೮೫	...	೨
೧೯೮೫-೮೬	...	೧
೧) ೧೯೮೪-೮೫ರಲ್ಲಿ	೧) ಸಿಸ್ಟಮ್ಸ್ ಮ್ಯಾನುಫ್ಯಾಕ್ಚರಿಂಗ್ ಲಿಮಿಟೆಡ್, ಇಂಡಸ್ಟ್ರಿಯಲ್ ಏರಿಯಾ, ಬೆಂಗಳೂರು.	
	೨೨) ಹೆಗ್ಗಡೆ ಅಂಡ್ ಗೋಲೆ ಲಿಮಿಟೆಡ್,	